<u>**ಕರ್ನಾಟಕ ವಿಧಾನ ಪರಿಷತ್**</u>

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ : 84
ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್
ಉತ್ತರಿಸಬೇಕಾದ ದಿನಾಂಕ : 17.08.2026
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮಾರುಕಟ್ಟೆಯಲ್ಲಿ ತೊಗರಿಬೇಳೆ, ಅಡುಗೆ ಎಣ್ಣೆ, ಮೊಟ್ಟೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದರೂ, ಸರ್ಕಾರ ಶಾಲಾ ಬಿಸಿಯೂಟ ಯೋಜನೆಗೆ ನಿಗದಿಪಡಿಸಿರುವ ಹಳೆಯ ದರಗಳನ್ನೇ ಮುಂದುವರಿಸಿರುವುದರಿಂದ ರಾಜ್ಯಾದ್ಯಂತ ಬಹುತೇಕ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ನೀಡಲು ಶಿಕ್ಷಕರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>1) ಮಧ್ಯಾಹ್ನ ಉಪಹಾರ ಯೋಜನೆಯಡಿ ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ಕೇಂದ್ರ ಸರ್ಕಾರದಿಂದ ನಿಗದಿಪಡಿಸಲಾಗುವ ಅಡುಗೆ ತಯಾರಿಕಾ ವೆಚ್ಚದ ಮೊತ್ತದಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಅಗತ್ಯವಿರುವ ಪದಾರ್ಥಗಳಾದ ತೊಗರಿಬೇಳೆ , ಅಡುಗೆ ಎಣ್ಣೆ, ಉಪ್ಪು, ತರಕಾರಿ ಮತ್ತು ಇತ್ಯಾಧಿಗಳನ್ನು ಖರೀದಿಸಲಾಗುತ್ತದೆ.<br>2) ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಗ್ರಾಹಕ ಬೆಲೆ ಸೂಚ್ಯಾಂಕವನ್ನು ಆಧರಿಸಿ ಅಡುಗೆ ತಯಾರಿಕಾ ವೆಚ್ಚದ ದರವನ್ನು ಪರಿಷ್ಕರಿಸಲಾಗುತ್ತದೆ.<br>3) 2025-26ನೇ ಸಾಲಿನಲ್ಲಿ ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ಅನ್ವಯವಾಗುವ ಅಡುಗೆ ತಯಾರಿಕಾ ವೆಚ್ಚದ ದರವನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.
<table>
<tr><td>ತರಗತಿ</td><td>ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ಪರಿಷ್ಕರಿಸಲಾದ ಅಡುಗೆ ತಯಾರಿಕಾ ವೆಚ್ಚದ ದರ ರೂಪಾಯಿಗಳಲ್ಲಿ</td></tr>
<tr><td>ಪೂರ್ವ ಪ್ರಾಥಮಿಕ ದಿಂದ 5ನೇ ತರಗತಿಯ ವರೆಗೆ</td><td>6.78</td></tr>
<tr><td>6 ರಿಂದ 10ನೇ ತರಗತಿಯ ವರೆಗೆ</td><td>10.17</td></tr>
</table>
4) ಪ್ರತಿ ವರ್ಷ ಗ್ರಾಹಕ ಬೆಲೆ ಸೂಚ್ಯಾಂಕವನ್ನು ಆಧರಿಸಿ ಅಡುಗೆ ತಯಾರಿಕಾ ವೆಚ್ಚದ ದರವನ್ನು ಪರಿಷ್ಕರಿಸುವುದರಿಂದ ಶಿಕ್ಷಕರಿಗೆ ಮಧ್ಯಾಹ್ನ ಉಪಹಾರ ಯೋಜನೆಯನ್ನು ಅನುಷ್ಠಾನ ಮಾಡುವಲ್ಲಿ ಯಾವುದೇ ತೊಂದರೆಯಾಗುವುದಿಲ್ಲ.<br>5) ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನ ಒಂದು ಮೊಟ್ಟೆ ವಿತರಣೆಗೆ</td></tr>
</table>

| | | |
|---|---|---|
| | | ರೂ.6/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.<br>6) ಮೊಟ್ಟೆಯ ದರ ಮಾರುಕಟ್ಟೆಗಳಲ್ಲಿ ಏಕರೂಪವಾಗಿ ನಿಗದಿಯಾಗಿರುವುದಿಲ್ಲ. ಸ್ಥಳೀಯವಾಗಿ ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೊಟ್ಟೆಯ ದರದಲ್ಲಿ ಏರಿಳಿಕೆಯಾಗುತ್ತದೆ. ವಾರ್ಷಿಕ ಸರಾಸರಿ ದರಗಳನ್ನು ಪರಿಶೀಲಿಸಿದಾಗಿ ಮೊಟ್ಟೆ ವಿತರಣೆಗೆ ನಿಗದಿಪಡಿಸಲಾಗಿರುವ ದರವು ಸರಿಹೊಂದುತ್ತದೆ. ಪೋಷಕರ ಅಭಿಪ್ರಾಯ ಪಡೆದು ಮೊಟ್ಟೆ ಸೇವಿಸುವ ವಿದ್ಯಾರ್ಥಿಗೆ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸಲಾಗುತ್ತಿದೆ. ವಾಡಿಕೆ/ವೈಯಕ್ತಿಕ ಆಚರಣೆಯಿಂದಾಗಿ ವಿದ್ಯಾರ್ಥಿಗಳು ವಾರದಲ್ಲಿ ಕೆಲವು ದಿನ ಮೊಟ್ಟೆ ಸೇವಿಸುವುದಿಲ್ಲ. ಮೊಟ್ಟೆ ಸೇವಿಸದ ದಿನಗಳಂದು ಅಂತಹ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ನೀಡಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿಗಳು ವಾರದ ಎಲ್ಲಾ ದಿನಗಳಲ್ಲಿ ಮೊಟ್ಟೆಯನ್ನು ಸೇವಿಸದ ಕಾರಣ, ಕೆಲವು ವಿದ್ಯಾರ್ಥಿಗಳು ಮೊಟ್ಟೆ ಸೇವಿಸದೆ ಬಾಳೆಹಣ್ಣು ಸೇವಿಸುವ ಕಾರಣದಿಂದ ಹಾಗೂ ಶಾಲಾ ಹಂತದಲ್ಲಿ ಮೊಟ್ಟೆಯನ್ನು ಸಗಟು ದರಗಳಲ್ಲಿ ಖರೀದಿಸುವುದರಿಂದ ಶಿಕ್ಷಕರಿಗೆ ಆರ್ಥಿಕ ಹೊರೆಯಾಗುವುದಿಲ್ಲ. |
| ಆ) | ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಎಣ್ಣೆ-ಬೇಳೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ. ಮೈಸೂರು ಜಿಲ್ಲೆಯೊಂದರಲ್ಲೇ 2286 ಶಾಲೆಗಳ 1.69 ಲಕ್ಷ ಮಕ್ಕಳಿಗೆ ಬಿಸಿಯೂಟದ ಸಂಕಷ್ಟ ಎದುರಾಗಿರುವುದು ನಿಜವೇ; ಟೆಂಡರ್ ಮುಗಿಯದ ಕಾರಣಕ್ಕೆ ಶಿಕ್ಷಕರೇ ತಮ್ಮ ಕೈಯಿಂದ ಹಣ ಹಾಕಿ ಮಾರುಕಟ್ಟೆ ದರದಲ್ಲಿ ಸಾಮಗ್ರಿ ಖರೀದಿಸುತ್ತಿರುವುದು ಸರ್ಕಾರದ ಬೇಜವಾಬ್ದಾರಿತನವನ್ನು ತೋರಿಸುವುದಿಲ್ಲವೇ; | 1) ತೊಗರಿಬೇಳೆ ಮತ್ತು ಅಡುಗೆಎಣ್ಣೆ ಸರಬರಾಜಿಗೆ ಸಂಬಂಧಿಸಿದಂತೆ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿ ಜಿಲ್ಲೆಯಿಂದ ಬಂದ ಬೇಡಿಕೆಗೆ ಅನುಸಾರವಾಗಿ ತೊಗರಿಬೇಳೆ ಮತ್ತು ಅಡುಗೆಎಣ್ಣೆಯನ್ನು 2026-27 ನೇ ಸಾಲಿನ ಪ್ರಥಮ ತ್ರೈಮಾಸಿಕ ಅವಧಿಗೆ ಸರಬರಾಜು ಮಾಡಲಾಗಿದೆ.<br>2) ಟೆಂಡರ್ ಅಂತಿಮಗೊಳ್ಳುವ ತನಕ ಶಾಲೆಗಳಲ್ಲಿ ತೊಗರಿಬೇಳೆ ಮತ್ತು ಅಡುಗೆ ಎಣ್ಣೆಯನ್ನು ಅಗತ್ಯ ಕಂಡುಬಂದಲ್ಲಿ ಮಾತ್ರ, ಶಾಲಾ ಹಂತದಲ್ಲಿಯೇ ತೊಗರಿ ಬೇಳೆ ಮತ್ತು ಅಡುಗೆ ಎಣ್ಣೆಗೆ ಖರೀದಿಸಲು ಶಾಲೆಗಳಿಗೆ ಅನುದಾನವನ್ನು ನೀಡಲಾಗಿರುತ್ತದೆ.<br>3) ಯಾವುದೇ ಸಂದರ್ಭದಲ್ಲಿಯೂ ಶಿಕ್ಷಕರು ಸ್ವಂತ ಹಣವನ್ನು ಭರಿಸುವ ಅಗತ್ಯತೆ ಉಂಟಾಗಿರುವುದಿಲ್ಲ.<br>4) ಪ್ರಸ್ತುತ ಆಗಸ್ಟ್-2026 ಮತ್ತು ಸೆಪ್ಟೆಂಬರ್ ಮಾಹೆಗಳಿಂದ ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯವಿರುವ ಸೂರ್ಯಕಾಂತಿ ಎಣ್ಣೆ ಮತ್ತು ತೊಗರಿಬೇಳೆಯ ಖರೀದಿ |

| | | |
|---|---|---|
| | | ಪ್ರಕ್ರಿಯೆಯನ್ನು NCDEX Platform ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ಹಾಗೂ ನಿಯಮಗಳಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ನಿರ್ವಹಿಸಲು ಆದೇಶ ನೀಡಲಾಗಿದೆ. |
| ಇ) | ಸರ್ಕಾರಿ ದರಕ್ಕೂ ಮತ್ತು ಮಾರುಕಟ್ಟೆ ದರಕ್ಕೂ ಭಾರಿ ವ್ಯತ್ಯಾಸವಿರುವುದು (ಉದಾಹಣೆಗೆ:ಸರ್ಕಾರಿ ತೊಗರಿಬೇಳೆಗೆ ರೂ.103.50 ನಿಗದಿಪಡಿಸಿದ್ದರೆ ಮಾರುಕಟ್ಟೆಯಲ್ಲಿ ರೂ.140 ಇದೆ: ಅಡುಗೆ ಎಣ್ಣೆಗೆ ರೂ.160 ನಿಗದಿಪಡಿಸಿದ್ದರೆ ಮಾರುಕಟ್ಟೆಯಲ್ಲಿ ರೂ.180 ಇದೆ: ಮೊಟ್ಟೆಗೆ ರೂ.6 ನಿಗದಿಪಡಿಸಿದ್ದರೆ ಮಾರುಕಟ್ಟೆಯಲ್ಲಿ ರೂ.7.50 ಇದೆ) ಈ ಹೆಚ್ಚುವರಿ ಆರ್ಥಿಕ ಹೊರೆಯನ್ನು ಶಿಕ್ಷಕರ ಮೇಲೆ ಹೇರುತ್ತಿರುವುದಕ್ಕೆ ಕಾರಣಗಳೇನು: | 1) ರಾಜ್ಯ / ಜಿಲ್ಲಾ ಹಂತದಲ್ಲಿ ತೊಗರಿಬೇಳೆ ಮತ್ತು ಅಡುಗೆಎಣ್ಣೆಯ ಟೆಂಡರ್‌ನಲ್ಲಿ ಮಿಲ್/ಸಗಟು ಸರಬರಾಜುದಾರರು ಭಾಗವಹಿಸುವುದರಿಂದ ಸಗಟು ದರದಲ್ಲಿ ತೊಗರಿಬೇಳೆ ಮತ್ತು ಅಡುಗೆ ಎಣ್ಣೆ ಲಭ್ಯವಾಗುತ್ತದೆ. ಇದರಿಂದಾಗಿ ಟೆಂಡರ್‌ದರವು ಮಾರು ಕಟ್ಟೆಯ ದರಕ್ಕಿಂತ ಕಡಿಮೆ ಇರುತ್ತದೆ.<br>2) ಮಧ್ಯಾಹ್ನ ಉಪಹಾರ ಯೋಜನೆಗೆ ಸರ್ಕಾರವೇ ಅನುದಾನವನ್ನು ನೀಡುವುದರಿಂದ ಶಿಕ್ಷಕರ ಮೇಲೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ.<br>3) ಮೊಟ್ಟೆಯ ದರ ಮಾರುಕಟ್ಟೆಗಳಲ್ಲಿ ಏಕರೂಪವಾಗಿ ನಿಗದಿಯಾಗಿರುವುದಿಲ್ಲ. ಸ್ಥಳೀಯವಾಗಿ ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೊಟ್ಟೆಯ ದರದಲ್ಲಿ ಏರಿಳಿಕೆಯಾಗುತ್ತದೆ. ವಾರ್ಷಿಕ ಸರಾಸರಿ ದರಗಳನ್ನು ಪರಿಶೀಲಿಸಿದಾಗಿ ಮೊಟ್ಟೆ ವಿತರಣೆಗೆ ನಿಗದಿಪಡಿಸಲಾಗಿರುವ ದರವು ಸರಿಹೊಂದುತ್ತದೆ. ಪೋಷಕರ ಅಭಿಪ್ರಾಯ ಪಡೆದು ಮೊಟ್ಟೆ ಸೇವಿಸುವ ವಿದ್ಯಾರ್ಥಿಗೆ ಮೊಟ್ಟೆ ಹಾಗೂ ಮೊಟ್ಟೆ ಸೇವಿಸದ ವಿದ್ಯಾರ್ಥಿಗಳಿಗೆ ಬಾಳೆಹಣ್ಣನ್ನು ವಿತರಿಸಲಾಗುತ್ತಿದೆ. ವಾಡಿಕೆ/ವ್ಯೆಯಕ್ತಿಕ ಆಚರಣೆಯಿಂದಾಗಿ ವಿದ್ಯಾರ್ಥಿಗಳು ವಾರದಲ್ಲಿ ಕೆಲವು ದಿನ ಮೊಟ್ಟೆ ಸೇವಿಸುವುದಿಲ್ಲ. ಮೊಟ್ಟೆ ಸೇವಿಸದ ದಿನಗಳಂದು ಅಂತಹ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ನೀಡಲಾಗುತ್ತಿದೆ. ಎಲ್ಲಾ ವಿದ್ಯಾರ್ಥಿಗಳು ವಾರದ ಎಲ್ಲಾ ದಿನಗಳಲ್ಲಿ ಮೊಟ್ಟೆಯನ್ನು ಸೇವಿಸದ ಕಾರಣ, ಕೆಲವು ವಿದ್ಯಾರ್ಥಿಗಳು ಮೊಟ್ಟೆ ಸೇವಿಸದೆ ಬಾಳೆಹಣ್ಣು ಸೇವಿಸುವ ಕಾರಣದಿಂದ ಹಾಗೂ ಶಾಲಾ ಹಂತದಲ್ಲಿ ಮೊಟ್ಟೆಯನ್ನು ಸಗಟು ದರಗಳಲ್ಲಿ ಖರೀದಿಸುವುದರಿಂದ ಶಿಕ್ಷಕರಿಗೆ ಆರ್ಥಿಕ ಹೊರೆಯಾಗುವುದಿಲ್ಲ. |

| | | |
|---|---|---|
| ಈ) | ಆರ್ಥಿಕ ಹೊರೆ ಭರಿಸಲಾಗದೆ ಕೆಲವು ಶಾಲೆಗಳಲ್ಲಿ ಮಕ್ಕಳಿಗೆ ಬಳಸಬೇಕಾದ ನಿಗದಿತ ಬಿಸಿಯೂಟದ ಪ್ರಮಾಣವನ್ನು (ಬೇಳೆ. ಎಣ್ಣೆ ಇತ್ಯಾದಿ) ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಮಕ್ಕಳ ಪೌಷ್ಟಿಕತೆಗೆ ಧಕ್ಕೆ ತರುತ್ತಿರುವ ಈ ಬೆಲೆ ಏರಿಕೆಯ ಬಿಕ್ಕಟ್ಟನ್ನು ಬಗೆಹರಿಸಲು ಸರ್ಕಾರ ಬಿಸಿಯೂಟದ ಅನುದಾನವನ್ನು ತಕ್ಷಣವೇ ಪರಿಷ್ಕರಿಸುವುದೇ? (ವಿವರ ನೀಡುವುದು) | 1) ಮಧ್ಯಾಹ್ನ ಬಿಸಿಯೂಟ ಯೋಜನೆ ಅಡಿಯಲ್ಲಿ ಸರ್ಕಾರವು ನಿಗದಿ ಪಡಿಸಿದ ಪ್ರಮಾಣದಲ್ಲಿಯೇ ಆಹಾರ ಧಾನ್ಯ ಹಾಗೂ ತರಕಾರಿಗಳನ್ನು ಬಳಸಲಾಗುತ್ತಿದೆ.<br>2) ಅಡುಗೆ ತಯಾರಿಕಾ ವೆಚ್ಚದ ದರವನ್ನು ಕೇಂದ್ರ ಸರ್ಕಾರದಿಂದ ನಿಗದಿ ಪಡಿಸಲಾಗುತ್ತದೆ ಹಾಗೂ ಪ್ರತಿ ವರ್ಷ ಗ್ರಾಹಕ ಬೆಲೆ ಸೂಚ್ಯಾಂಕವನ್ನು ಆಧರಿಸಿ ಅಡುಗೆ ತಯಾರಿಕಾ ವೆಚ್ಚದ ದರವನ್ನು ಕೇಂದ್ರ ಸರ್ಕಾರದಿಂದ ಪರಿಷ್ಕರಿಸುವುದರಿಂದ ಕೇಂದ್ರ ಸರ್ಕಾರವು ನಿಗದಿ ಪಡಿಸಿದ ದರವನ್ನು 60:40 ರ ಅನುಪಾತದಲ್ಲಿ ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ. 2025-26 ನೇ ಸಾಲಿನಲ್ಲಿ ಅಡುಗೆ ತಯಾರಿಕಾ ವೆಚ್ಚದ ದರವನ್ನು ಪರಿಷ್ಕರಣೆ ಮಾಡಲಾಗಿದೆ. ಕೇಂದ್ರ ಸರ್ಕಾರವು ದರ ಪರಿಷ್ಕರಣೆ ಮಾಡಿದಾಗ ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರದ ಪಾಲನ್ನು ಭರಿಸಲಾಗುತ್ತದೆ. |

ಸಂಖ್ಯೆ: ಇಪಿ 226 ಯೋಸಕ 2026

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**